

ಇತಿಹಾಸ ಪ್ರಸಿದ್ಧ, ಪ್ರೇಕ್ಷಣೀಯ ಹಾಗೂ ಪಾರಂಪರಿಕ ತಾಣಗಳ ಬಗ್ಗೆ ಮಾತನಾಡುವಾಗ, 'ಎರಡು ಕಣ್ಣು ಸಾಲದು' ಎನ್ನುವ ಉದ್ಗಾರ ಹೊರಡುವುದು ಸಹಜ. ಅಂಥ ತಾಣಗಳು ಸ್ವಾರಸ್ಯಕರ–ರೋಚಕ ಸಂಗತಿಗಳ ಕಣಜಗಳೇ ಆಗಿರುತ್ತವೆ ಎನ್ನುವುದು ಆ ಉದ್ಗಾರದ ಒಳಮರ್ಮ.

ಕನ್ನಡ ನಾಡಿನ ಪ್ರಥಮ ರಾಜಧಾನಿ ಎನಿಸಿದ ಕದಂಬರ ಬನವಾಸಿಯಂತೂ ನೋಡುವ ಕಣ್ಣುಗಳಿಗೆ ಹಬ್ಬ. ಆದಿಕವಿ ಪಂಪ ತನ್ನ 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ ಬನವಾಸಿಯನ್ನು ವರ್ಣಿಸುತ್ತ 'ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದಿದ್ದಾನೆ. ಆ ಬನವಾಸಿ ಉತ್ತರ ಕನ್ನಡ ಜಿಲ್ಲೆ ಶಿರಸಿಯ ಸಮೀಪದ ಊರು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ವರದಾ ನದಿ ದಂಡೆಯ ಪ್ರಶಾಂತ ಪರಿಸರದಲ್ಲಿ, ಪರಂಪರೆಯ ಬೆಚ್ಚನೆಯ ಸ್ಪರ್ಶದೊಂದಿಗೆ ಅನಾವರಣಗೊಂಡಿದೆ ಸುಂದರ ಊರು ಬನವಾಸಿ. ಅಲ್ಲಿರುವ ಮಧುಕೇಶ್ವರನ ಸನ್ನಿಧಿ ಪ್ರವಾಸಿಗರನ್ನು ಕೈಬೀಸಿ ಕರೆಯುವ ಸುಂದರ ತಾಣ. ಕದಂಬರ ರಾಜಧಾನಿಯಾಗಿದ್ದ ಬನವಾಸಿ ಶತಶತಮಾನಗಳ ಇತಿಹಾಸವನ್ನು ಹೊಂದಿರುವ ಕ್ಷೇತ್ರ. ಮಧುಕೇಶ್ವರ, ಉಮಾಮಹೇಶ್ವರ ಸೇರಿದಂತೆ ಒಟ್ಟು 32 ದೇವಾನುದೇವತೆಗಳಿದ್ದ ದೇಗುಲ ಸಮುಚ್ಚಯದಲ್ಲಿ ಒಂದು ಸುತ್ತು ಹಾಕಿ ಬಂದರೆ ದಿವ್ಯಾನುಭೂತಿಯ ಅನುಭವವಾಗುತ್ತದೆ.

ಭವ್ಯ ಪರಂಪರೆಯ ಹಿನ್ನೆಲೆ ಜೊತೆಗಿದ್ದರೂ ಅಲ್ಲಿನ ಶಿಥಿಲಗೊಂಡಿರುವ ರಥ, ದೇಗುಲಗಳ ನಿರ್ವಹಣೆಯ ಕೊರತೆ, ಅಭಿವೃದ್ಧಿಗೆ ಅನುದಾನದ ಸಮಸ್ಯೆಗಳನ್ನು ಗಮನಿಸಿದರೆ ಚಾರಿತ್ರಿಕ ಸ್ಥಳಗಳ ಬಗೆಗಿನ ನಮ್ಮ ಅವಜ್ಞೆ ಎದ್ದು ಕಾಣುತ್ತದೆ.

### ಇತಿಹಾಸದತ್ತ ನೋಟ

ಬನವಾಸಿ ಕದಂಬರ ವೈಭವಯುತವಾದ ರಾಜಧಾನಿಯಾಗಿತ್ತು. ಕ್ರಿ.ಶ. 1ನೇ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ ಗ್ರೀಕ್ ಪ್ರವಾಸಿ ಟಾಲೆಮಿ ಈ ಪಟ್ಟಣವನ್ನು 'ಬನೌಸಿ' ಎಂದು ಕರೆದಿದ್ದಾನೆ. ಕ್ರಿ.ಶ. 4ನೇ ಶತಮಾನದಲ್ಲಿ 'ಜಯಂತಿಪುರ' ಅಥವಾ 'ವೈಜಯಂತಿ' ಎಂದು ಕರೆಯಲಾಗುತ್ತಿತ್ತು. ಮಹಾಭಾರತದಲ್ಲಿಯೂ ಬನವಾಸಿಯ ಉಲ್ಲೇಖವಿದ್ದು, 'ವನವಾಸಕ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು.

ಕದಂಬ ರಾಜ್ಯವನ್ನು ಕರ್ನಾಟಕದ ಪ್ರಥಮ ರಾಜ್ಯವೆಂದು ವರ್ಣಿಸಲಾಗುತ್ತಿದೆ. ಆ ರಾಜ್ಯದ ಸ್ಥಾಪಕ ಮಯೂರವರ್ಮ (ಕ್ರಿ.ಶ.325–345). ಆತನ ರಾಜಧಾನಿ ಬನವಾಸಿ. ಬೌದ್ಧ ಧರ್ಮ ಪ್ರಸಾರಕ್ಕಾಗಿ ಅಶೋಕ ಚಕ್ರವರ್ತಿ ಕಳುಹಿಸಿದ ಬೌದ್ಧ ಭಿಕ್ಷು ರಖ್ಖಿತನು ಬನವಾಸಿ ಪ್ರಾಂತಕ್ಕೆ ಬಂದಿದ್ದನೆಂದು 'ಮಹಾವಂಶ' ಎಂಬ ಬೌದ್ಧಗ್ರಂಥ ತಿಳಿಸುತ್ತಿದೆ. ನಾಗಾರ್ಜುನಕೊಂಡದ ಒಂದು ಶಾಸನದ ಪ್ರಕಾರ ಸಿಂಹಳದ ಬೌದ್ಧ ಭಿಕ್ಷುಗಳು ಧರ್ಮಪ್ರಸಾರಕ್ಕಾಗಿ ಬನವಾಸಿಗೆ ಬಂದಿದ್ದರಂತೆ.

### ಮಧುಕೇಶ್ವರನ ಸನ್ನಿಧಿಯಲ್ಲಿ

ಬನವಾಸಿಯ ಪ್ರಮುಖ ಆಕರ್ಷಣೆ ಅಲ್ಲಿನ ಆರಾಧ್ಯ ದೈವ ಮಧುಕೇಶ್ವರ. ಕರ್ನಾಟಕದ ಏಳು ಪ್ರಮುಖ ಮುಕ್ತಿ ಸ್ಥಳಗಳಲ್ಲಿ ಒಂದೆಂದು ಮಧುಕೇಶ್ವರನ ಸನ್ನಿಧಿ ಹೆಸರಾಗಿದೆ. ಪ್ರಸಿದ್ಧ

### ಪುರಾತನ ಕೋಟೆ

ರಾಜ ಮಹಾರಾಜರ ಕಾಲದ ಕೋಟೆ ಕೊತ್ತಲಗಳು ಭದ್ರತೆಯ ಸಂಕೇತ. ಶತ್ರು ರಾಜಪಾಳೆಯದ ಸೈನಿಕರಿಂದ ರಕ್ಷಣೆ ಪಡೆಯುವುದಕ್ಕಾಗಿ ಎತ್ತರೆತ್ತರದ ಕೋಟೆಗಳನ್ನು ನಿರ್ಮಿಸಲಾಗುತ್ತಿತ್ತು. ಬನವಾಸಿಯ ಕೋಟೆ ಬಹಳ ಪುರಾತನವಾದದ್ದು. ಅಂದಾಜು ಕ್ರಿ.ಶ 1000 ಇಸವಿಯ ಸುಮಾರಿಗೆ ಸೇರಿದ್ದಿರಬಹುದಾದ, ಚಂದ್ರವಳ್ಳಿಯಲ್ಲಿ ದೊರೆತಿರುವ ಇಟ್ಟಿಗೆಗಳಂತಹ ದೊಡ್ಡ ಚಪ್ಪಟೆ ಇಟ್ಟಿಗೆಗಳನ್ನು ಈ ಕೋಟೆಯ ಗೋಡೆಯ ಕೆಳಗಿನ ವರಸೆಗಳಲ್ಲಿ ಕಾಣಬಹುದು. ಇಟ್ಟಿಗೆಯ ಗೋಡೆಯ ಮೇಲೆ ಜಂಬಿಟ್ಟಿಗೆಯ ದಪ್ಪ ಗೋಡೆಯನ್ನು ಕಟ್ಟಲಾಗಿದೆ. ಇದು ವಿಜಯನಗರದ ಕಾಲದಲ್ಲಿ ಕಟ್ಟಲಾದದ್ದು ಎನ್ನಲಾಗಿದೆ. ಪಂಪ ವರ್ಣಿಸಿದ ಬನವಾಸಿಯ ನಿಸರ್ಗಸಿರಿ ತಕ್ಕಮಟ್ಟಿಗೆ ಉಳಿದುಕೊಂಡಿದೆ.

